ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೨೬, ಮಾರ್ಚ್, ೨೦೨೬(ಚೈತ್ರ, ೦೫, ಶಕವರ್ಷ, ೧೯೪೮)	ಸಂಚಿಕೆ ೬೦
Volume - 161	BENGALURU, THURSDAY , 26, MARCH, 2026(CHAITHRA, 05, SHAKAVARSHA, 1948)	Issue 60

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

Commerce & Industries Department,
Karnataka Government Secretariat,
Vikasa Soudha, Dr. BR Ambedkar Road,
Bangalore - 560001.
Tel. 080-22034625 Fax. 080-22353932

No. CI 66 SPI 2021 **Date:17.03.2026**

NOTIFICATION

The Draft of the following rules to amend the Karnataka Special Investment Region Rules, 2023 is which the Government of Karnataka proposes to make in exercise of the powers conferred by sub-section (1) of Section 37 of the Karnataka Special Investment Region Act, 2022 (Karnataka Act No.5 of 2023), is hereby published as required by sub-section (1) of Section 37 of the said Act for the information of all the persons likely to be affected thereby notice is given that the said draft will be taken into consideration after expiry of thirty days from the date of its publication in the Official Gazette.

Any objection and suggestion which may be received by the State Government from any person with respect to the said Draft before the expiry of the period specified above will be considered by the State Government. Objections and suggestions may be addressed to the Principal Secretary to Government, Commerce and Industries Department, Vikasa Soudha, Dr. B.R. Ambedkar Veedhi, Bengaluru.

DRAFT RULES

1. Title and commencement. - (1) These rules may be called the Karnataka Special Investment Region (Amendment) Rules, 2026.

(2) They shall come into force from the date of their final publication in the Official Gazette.

2. Amendment of Rule 12.- In the Karnataka Special Investment Region Rules, 2023, in Rule 12, after sub-rule (1), the following shall be inserted, namely:

"(1A) The Regional Development Authority shall ensure that all property tax collections and related accounts are maintained in electronic form and e-Khata or e-Swathu or e-Aasthi, as the case may be, is opened in respect of every property and e-Khata or e-Swathu or e-Aasthi certificate, as the case may be, shall be issued to every Khata holder or property holder by the Regional Development Authority."

By Order and in the name of the Governor of Karnataka,

(SHILPA .S.R)
Desk Officer (Technical Cell),
Commerce & Industries Department.

PR-287

ಕರ್ನಾಟಕ ಸರ್ಕಾರ

ಸಂಖ್ಯೆ: MWD 396 MDS 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ:23.03.2026.

ಅಧಿಸೂಚನೆ

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದ ಸಹವಾಚನದೊಂದಿಗೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ,ಈ ಮೂಲಕ ರಚಿಸಲು ಉದ್ದೇಶಿಸಿರುವ ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಸೇವೆಗಳು (ಶಿಕ್ಷಕರು ಮತ್ತು ಉಪನ್ಯಾಸಕರ ವರ್ಗಾವಣೆಗಳ ನಿಯಂತ್ರಣ) ನಿಯಮಗಳು, 2026ರ ಕರಡನ್ನು ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಇದರಿಂದ ಬಾಧಿತರಾಗುವ ಸಂಭವವಿರಬಹುದಾದಂಥ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿಈ ಮೂಲಕ ಪ್ರಕಟಿಸಲಾಗಿದೆಮತ್ತು ಸದರಿ ಕರಡನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳು ಮುಕ್ತಾಯವಾದ ತರುವಾಯ, ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಲಾದ ಅವಧಿಯು ಮುಕ್ತಾಯವಾಗುವುದಕ್ಕಿಂತ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದಂಥ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ

ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ಸಲ್ಲಿಸಬಹುದಾಗಿದೆ.

ಕರಡು ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:-(1)ಈ ನಿಯಮಗಳನ್ನು ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಸೇವೆಗಳು (ಶಿಕ್ಷಕರು ಮತ್ತು ಉಪನ್ಯಾಸಕರ ವರ್ಗಾವಣೆಗಳ ನಿಯಂತ್ರಣ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು:- ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು:-

(ಎ) "ವಾಸ್ತವಿಕ ಕೆಲಸ ಮಾಡುವ ಸ್ಥಳ" ಎಂದರೆ, ನೌಕರರು ತಮ್ಮ ದೈನಂದಿನ ಹಾಜರಾತಿಯನ್ನು ಎಲ್ಲಿ ದಾಖಲಿಸುತ್ತಾರೋ ಆ ಸ್ಥಳ;

(ಬಿ) "**ನೇಮಕಾತಿ**" ಎಂದರೆ, ನೇರ ನೇಮಕಾತಿ, ವಿಲೀನಗೊಳಿಸುವಿಕೆ ಅಥವಾ ಬಡ್ತಿಯ ಮೂಲಕ ಮಾಡುವ ನೇಮಕಾತಿ;

(ಸಿ) "**ನೇಮಕಾತಿ ಪ್ರಾಧಿಕಾರ**" ಎಂದರೆ, ಅನುಸೂಚಿಯ ಕೋಷ್ಟಕ-I ರಲ್ಲಿ ನಿರ್ದಿಷ್ಟಪಡಿಸಿದಂತೆ, ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಸಂಬಂಧಿಸಿದ್ದಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರು;

(ಡಿ) "**ಸಕ್ಷಮ ಪ್ರಾಧಿಕಾರ**" ಎಂದರೆ, ಅನುಸೂಚಿಯ ಕೋಷ್ಟಕ-II ರಲ್ಲಿ ನಿರ್ದಿಷ್ಟಪಡಿಸಿದಂತೆ, ವರ್ಗಾವಣೆ ಪ್ರಕ್ರಿಯೆಗಾಗಿ ಇರುವ ಸಕ್ಷಮ ಪ್ರಾಧಿಕಾರ;

(ಇ) "**ಕೌನ್ಸೆಲಿಂಗ್**" ಎಂದರೆ, ಈ ನಿಯಮಗಳ ಅನುಸಾರ ಲಭ್ಯವಿರುವ ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ವರ್ಗಾವಣೆಗಾಗಿ ಪರಿಗಣಿಸಲಾದ ನೌಕರನಿಗೆ ಅವಕಾಶವನ್ನು ನೀಡುವ ಮೂಲಕ ನೇಮಕಾತಿ ಪ್ರಾಧಿಕಾರವು ನಡೆಸುವ ಪ್ರಕ್ರಿಯೆ;

(ಎಫ್) "**ನೌಕರ**" ಎಂದರೆ, ಶಿಕ್ಷಕರು ಮತ್ತು ಉಪನ್ಯಾಸಕರು;

(ಜಿ) "**ನಮೂನೆ**" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ;

(ಹೆಚ್) "**ಸರ್ಕಾರ**" ಎಂದರೆ, ಕರ್ನಾಟಕ ಸರ್ಕಾರ;

(ಐ) "**ಶಾಲೆ ಅಥವಾ ಕಾಲೇಜು**" ಎಂದರೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು, ಡಾ||ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆ ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆ;

(ಜೆ) "**ಉಪನ್ಯಾಸಕರು**" ಎಂದರೆ, ಶಾಲೆ ಅಥವಾ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು;

(ಕೆ) "**ಶಿಕ್ಷಕರು**" ಎಂದರೆ, ಶಾಲೆ ಅಥವಾ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು;

(ಎಲ್) "**ಧಾರಣಾಧಿಕಾರ (ಲಿನ್)"** ಎಂದರೆ, ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958 ರಲ್ಲಿ ಪರಿಭಾಷಿಸಲಾದಂಥ ಅದೇ ಅರ್ಥವನ್ನು ಹೊಂದಿರುತ್ತದೆ.

(ಎಮ್)"**ಕನಿಷ್ಠ ಅವಧಿ**" ಎಂದರೆ, ಬಿ ಗುಂಪಿನ ವೃಂದದಲ್ಲಿ ಎರಡು ವರ್ಷಗಳ ಕಾಲ ಮತ್ತು ಸಿಗುಂಪಿನ ವೃಂದದಲ್ಲಿ ನಾಲ್ಕು ವರ್ಷಗಳ ಕಾಲ ಸಲ್ಲಿಸಿದ ನಿರಂತರ ಸೇವೆ;

(ಎನ್) "**ನಿಗದಿತ ಮಾನದಂಡವುಳ್ಳ ಅಂಗವಿಲ ವ್ಯಕ್ತಿ**." ಎಂದರೆ, ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 49) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಪರಿಭಾಷಿಸಲಾದಂತೆ ನಿಗದಿತ ಮಾನದಂಡವುಳ್ಳ ಅಂಗವಿಕಲ ವ್ಯಕ್ತಿ;

(ಒ) "**ಪ್ರಪತ್ರ**" ಎಂದರೆ, ನಮೂನೆ-I ರಲ್ಲಿ ನಿರ್ದಿಷ್ಟಪಡಿಸಿದಂಥ ಪ್ರಪತ್ರ;

(ಪಿ) "**ನಿಯತ ನಿಯುಕ್ತಿ**." ಎಂದರೆ ನೌಕರನು ಧಾರಣಾಧಿಕಾರವನ್ನು ಹೊಂದಿರುವ ಆತನ ನಿಯುಕ್ತಿಯ ಸ್ಥಳ;

(ಕ್ಯೂ)"**ಅನುಸೂಚಿ**" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ;

(ಆರ್) "**ಗಂಭೀರ ಕಾಯಿಲೆಗಳು**" ಎಂದರೆ,-

(i) ನೌಕರನ ಸಂದರ್ಭದಲ್ಲಿ, ಸರ್ಕಾರವು ಅಧಿಸೂಚಿಸಬಹುದಾದಂಥ ಕಾಯಿಲೆಗಳ ಪಟ್ಟಿ; ಮತ್ತು

(ii) ನೌಕರನ ಪತಿ/ಪತ್ನಿ ಮತ್ತು ಅವರ ಮಕ್ಕಳ ಸಂದರ್ಭದಲ್ಲಿ, ಸರ್ಕಾರವು ಅಧಿಸೂಚಿಸಬಹುದಾದಂಥ ಕಾಯಿಲೆಗಳ ಪಟ್ಟಿ.

– ಅನ್ನು ಒಳಗೊಂಡಿರುತ್ತದೆ;

(ಎಸ್) "**ಪತಿ/ಪತ್ನಿ ಪ್ರಕರಣ**" ಎಂದರೆ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಸಾರ್ವಜನಿಕ ವಲಯ ಉದ್ಯಮ ಅಥವಾ ವಾಣಿಜ್ಯ ಸಂಸ್ಥೆ ಅಥವಾ ನಿಗಮ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಸ್ವಾಮ್ಯದ ಮಂಡಳಿ ಅಥವಾ ರಾಜ್ಯ ವಿಶ್ವವಿದ್ಯಾಲಯದ ನೌಕರನಾಗಿರುವ ನೌಕರನ ಪತಿ/ಪತ್ನಿ;

(ಟಿ) "**ವರ್ಗಾವಣೆ**" ಎಂದರೆ, ಒಬ್ಬ ನೌಕರನನ್ನು ಒಂದು ಕೆಲಸದ ಸ್ಥಳದಿಂದ ಮತ್ತೊಂದು ಕೆಲಸದ ಸ್ಥಳಕ್ಕೆ ನಿಯೋಜಿಸುವುದು ಮತ್ತು ಇದು ಜೇಷ್ಠತಾ ಘಟಕದ ಒಳಗಿನ ಅಥವಾ ಹೊರಗಿನ ವರ್ಗಾವಣೆಯನ್ನು ಒಳಗೊಂಡಿರುತ್ತದೆ; ಮತ್ತು

(ಯು)"**ಜೇಷ್ಠತಾ ಘಟಕ**" ಎಂದರೆ, ಸಂದರ್ಭಾನುಸಾರ ಶಿಕ್ಷಕರು/ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡುವಸಕ್ಷಮ ನೇಮಕಾತಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ರಾಜ್ಯ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಅವುಗಳಿಗೆ ಗೊತ್ತುಪಡಿಸಲಾದಂಥ ಅರ್ಥವನ್ನೇ ಹೊಂದಿರತಕ್ಕದ್ದು.

3. ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಅಥವಾ ಕೋರಿಕೆಯ ಮೇರೆಗೆ ಕೌನ್ಸೆಲಿಂಗ್ ಮೂಲಕ ನೌಕರರ ವರ್ಗಾವಣೆ.- (1) ಈ ನಿಯಮಗಳ ಅಡಿಯಲ್ಲಿ ಒಬ್ಬ ನೌಕರನ ವರ್ಗಾವಣೆಯನ್ನು ಖಾಲಿ ಹುದ್ದೆಗಳನ್ನು ವಿವೇಚನಾಯುಕ್ತವಾಗಿ ಭರ್ತಿ ಮಾಡುವುದನ್ನು ಖಾತರಿಪಡಿಸಲು ನಿಯಮ 8ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಡೆಸಲಾಗುವ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಮಾಡತಕ್ಕದ್ದು.

(2) ಈ ನಿಯಮಗಳು ಜಾರಿಗೆ ಬಂದ ದಿನಾಂಕದಂದು ಸೇವೆಯಲ್ಲಿರುವಂಥ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನೌಕರರು, ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಕರು / ಉಪನ್ಯಾಸಕರ ಹುದ್ದೆಯಲ್ಲಿ ಕನಿಷ್ಠ ಅವಧಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಪೂರೈಸಿದ್ದರೆ, ಅಂಥವರನ್ನು ಅವರ ಕೋರಿಕೆಯ ಮೇರೆಗೆ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ, ಆಯಾ ಶಾಲೆ ಅಥವಾ ಕಾಲೇಜಿನಲ್ಲಿ ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇಲೆ ಮತ್ತೊಂದು ಶಾಲೆ ಅಥವಾ ಕಾಲೇಜಿಗೆ ವರ್ಗಾವಣೆ ಮಾಡಬಹುದು:

ಪರಂತು, 'ಬಿ' ಗುಂಪಿನ ಸೇವೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಮತ್ತು 'ಸಿ' ಗುಂಪಿನ ಸೇವೆಯಲ್ಲಿ ನಾಲ್ಕು ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರುವ ನೌಕರರನ್ನು ಅವರ ಸೇವಾ ಅವಧಿಯ ಆಧಾರದ ಮೇಲೆ ವರ್ಗಾವಣೆ

ಮಾಡತಕ್ಕದ್ದು. ಒಂದೇ ಸ್ಥಳದಲ್ಲಿ ದೀರ್ಘಾವಧಿಯಿಂದ ಸೇವೆ ಸಲ್ಲಿಸುತ್ತಿರುವ ನೌಕರನನ್ನು ಅವನ ನಿಯತ ನಿಯುಕ್ತಿಯ ಸ್ಥಳದಲ್ಲಿ ಆತನನ್ನು ಅವರೋಹಣ ಕ್ರಮದಲ್ಲಿ ಪರಿಗಣಿಸಿ ಸಾರ್ವಜನಿಕ ಹಿತದೃಷ್ಟಿಯಿಂದ, ನಿಯಮ-4ರ ಉಪಬಂಧಗಳಿಗೆ ಒಳಪಟ್ಟು, ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಕಡ್ಡಾಯವಾಗಿ ವರ್ಗಾವಣೆ ಮಾಡತಕ್ಕದ್ದು.

(3) ನಿಯಮ-4ರ ಕೋಷ್ಟಕದ ಕ್ರಮ ಸಂಖ್ಯೆ 2ರ (ಎ), (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಿಗೆ ಸೇರಿದ ನೌಕರರು, ಉಪ-ನಿಯಮ (2) ರ ನಿಬಂಧನೆಯಲ್ಲಿ ತಿಳಿಸಿದಂತೆ ಪ್ರಸ್ತುತ ನಿಯತ ನಿಯುಕ್ತಿಯ ಸ್ಥಳದಲ್ಲಿ ಈ ನಿಯಮಗಳಲ್ಲಿ ಉಲ್ಲೇಖಿಸಲಾದ ಕನಿಷ್ಠ ಸೇವಾ ಅವಧಿಯನ್ನು ಪೂರೈಸಿದ ತರುವಾಯ, ನಿಯಮ-4ರ ಉಪಬಂಧಗಳಿಗೆ ಒಳಪಟ್ಟು ಕೌನ್ಸೆಲಿಂಗ್ ಮೂಲಕ ವರ್ಗಾವಣೆಗಾಗಿ ಕೋರಬಹುದು. ಈ ಉದ್ದೇಶಕ್ಕಾಗಿ, ನೌಕರರು ಕೋಷ್ಟಕದ ಕ್ರಮ ಸಂಖ್ಯೆ 2ರ (ಎ), (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರವರ್ಗಗಳ ಅಡಿಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಸದರಿ ಕೋಷ್ಟಕದ ಕ್ರಮ ಸಂಖ್ಯೆ 2ರ (ಬಿ), (ಸಿ), (ಡಿ) ಮತ್ತು (ಇ) ಪ್ರವರ್ಗಗಳ ಅಂಕಗಳನ್ನು ಒಟ್ಟುಗೂಡಿಸುವ ಮೂಲಕ ಒಟ್ಟು ವೇಟೇಜ್ ಅನ್ನು ಲೆಕ್ಕಹಾಕತಕ್ಕದ್ದು.

4. ವರ್ಗಾವಣೆ ಮೇಲಿನ ನಿರ್ಬಂಧ:-ಕೌನ್ಸೆಲಿಂಗ್ ಮೂಲಕ ನಡೆಸಲಾಗುವ ಒಟ್ಟು ವರ್ಗಾವಣೆಗಳ ಸಂಖ್ಯೆಯು ನೌಕರರ ಒಟ್ಟು ಕಾರ್ಯನಿರತ ಬಲದ ಶೇಕಡಾ ಹನ್ನೊಂದರಷ್ಟು ಮೀರತಕ್ಕದ್ದಲ್ಲ. ಈ ಒಟ್ಟು ಶೇಕಡಾ ಹನ್ನೊಂದರಷ್ಟು ವರ್ಗಾವಣೆಗಳ ಪೈಕಿ, ಶೇಕಡಾ ಮೂರರಷ್ಟು ವರ್ಗಾವಣೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೌನ್ಸೆಲಿಂಗ್ ಮೂಲಕ ನಡೆಸಲಾಗುವ ಕಡ್ಡಾಯ ವರ್ಗಾವಣೆಗಳಿಗಾಗಿ ಮೀಸಲಿಡತಕ್ಕದ್ದು ಮತ್ತು ಇನ್ನುಳಿದ ಶೇಕಡಾ ಎಂಟರಷ್ಟು ವರ್ಗಾವಣೆಗಳನ್ನು ಕೋಷ್ಟಕದ ಕ್ರಮ ಸಂಖ್ಯೆ 2ರ (ಎ), (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಿಗೆ ಸೇರಿದ ನೌಕರರ ಕೋರಿಕೆಯ ಮೇರೆಗೆ (ಸಂಬಂಧಪಟ್ಟ ನಮೂನೆಯಲ್ಲಿ) ಮಾಡಲಾಗುವ ವರ್ಗಾವಣೆಗಳಿಗಾಗಿ ಮೀಸಲಿಡತಕ್ಕದ್ದು:

ಪರಂತು, ಇಲಾಖಾ ವಿಚಾರಣೆಗಳು ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಎದುರಿಸುತ್ತಿರುವಂಥ ನೌಕರರನ್ನು ಅಂಥ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ವ್ಯವಹರಣೆಗಳು ಉದ್ಭವಿಸಿದ ಸ್ಥಳಗಳಿಗೆ ನಿಯುಕ್ತಿಗೊಳಿಸತಕ್ಕದ್ದಲ್ಲ.

ಕೋಷ್ಟಕ

ಕ್ರಮ ಸಂ	ಪ್ರವರ್ಗ		ವರ್ಗಾವಣೆಯ	ವೆಟೇಜ್
ಖ್ಯ	ಸಾರ್ವಜನಿಕ ಹಿತದೃಷ್ಟಿಯಿಂದ ನಡೆಸಲಾಗುವ ಕಡ್ಡಾಯ ವರ್ಗಾವಣೆಗಳು.		**ಶೇಕಡ ಪ್ರಮಾಣ**	-
ಕೋರಿಕೆ ವರ್ಗಾವಣೆಗಳು				
2.	ಎ	ಕೋರಿಕೆ ಮೇಲಿನ ವರ್ಗಾವಣೆ	ಶೇಕಡ 3ರಷ್ಟು	-
	ಬಿ	ಪತಿ/ಪತ್ನಿ ಪ್ರಕರಣಗಳು	ಶೇಕಡ 2ರಷ್ಟು	1
	ಸಿ	18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅವಲಂಬಿತ ಮಕ್ಕಳನ್ನು ಹೊಂದಿರುವ ಒಂಟಿ ಮಹಿಳೆ ಅಥವಾ ಒಂಟಿ ಪೋಷಕ/ಪೋಷಕಿ ಅಥವಾ ಅವಲಂಬಿತರಾಗಿರುವ ಒಂಟಿ ಪೋಷಕ ಅಥವಾ ವಿಧವೆ ಅಥವಾ ವಿಕಲಚೇತನ ಪತಿ/ಪತ್ನಿ/ಮಗುವನ್ನು ಹೊಂದಿರುವ ಪ್ರಕರಣಗಳು (ನಮೂನೆ-VI).	ಶೇಕಡ 1ರಷ್ಟು	2
	ಡಿ	ಗಂಭೀರ ಕಾಯಿಲೆಯ ಪ್ರಕರಣಗಳು	ಶೇಕಡ 1ರಷ್ಟು	3
	ಇ	ನಿಗದಿತ ಮಾನದಂಡವುಳ್ಳ ಅಂಗವಿಕಲನೌಕರರ ಪ್ರಕರಣಗಳು	ಶೇಕಡ 1ರಷ್ಟು	3
ಒಟ್ಟು			**ಶೇಕಡ 11 ರಷ್ಟು**	

ಸೂಚನೆ: ನಿಯಮ-4 ರ ಕೋಷ್ಟಕದ ಕ್ರಮ ಸಂಖ್ಯೆ 2ರ (ಎ), (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಿಗೆ ನಿಗದಿಪಡಿಸಿದ ಕೋಟಾವು ಬಳಕೆಯಾಗದೆ ಉಳಿದಿದ್ದಲ್ಲಿ, ಅದನ್ನು ಕ್ರಮ ಸಂಖ್ಯೆ 1ರಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಕ್ಕಾಗಿ ಬಳಸಿಕೊಳ್ಳಬಹುದು.

5. ಪರಸ್ಪರ ವರ್ಗಾವಣೆಗಳು.- (1) ಪರಸ್ಪರ ವರ್ಗಾವಣೆ ಕೋರುವ ನೌಕರರು ಕಡ್ಡಾಯವಾಗಿ ಕನಿಷ್ಠ ಸೇವಾ ಅವಧಿಯನ್ನು ಪೂರೈಸಿರಬೇಕು.

(2) ಪರಸ್ಪರ ವರ್ಗಾವಣೆಗಳ ಒಟ್ಟು ಸಂಖ್ಯೆಯು ನೌಕರರ ಒಟ್ಟು ಕಾರ್ಯನಿರತ ಬಲದ ಶೇಕಡಾ ಒಂದರಷ್ಟು ಮೀರತಕ್ಕದ್ದಲ್ಲ.

(3) ನಿಯಮ-4ರ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಶೇಕಡಾ 11ರ ಮಿತಿಯೊಳಗೆ ವರ್ಗಾವಣೆಯಾಗಿದೆಯೇ ಎಂದು ನಿರ್ಧರಿಸುವುದಕ್ಕಾಗಿ, ಪರಸ್ಪರ ವರ್ಗಾವಣೆಗಳ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(4) ಎಲ್ಲಾ ಪರಸ್ಪರ ವರ್ಗಾವಣೆಗಳನ್ನು ನೌಕರರಿಬ್ಬರ ಲಿಖಿತ ಸಮ್ಮತಿಯೊಂದಿಗೆ ಮಾತ್ರ ಮಾಡತಕ್ಕದ್ದು. ವರ್ಗಾವಣೆ ಆದೇಶಗಳನ್ನು ಹೊರಡಿಸುವ ಮೊದಲು ಈ ನಿರ್ಧಾರವನ್ನು ನೌಕರರಿಬ್ಬರೂ ಲಿಖಿತದಲ್ಲಿ ಸ್ಥಿರೀಕರಿಸತಕ್ಕದ್ದು.

6. ವರ್ಗಾವಣೆಗೆ ವಿನಾಯಿತಿಗಳು.-(1) ನಿಯಮ-4ರ ಕೋಷ್ಟಕದ ಕ್ರಮ ಸಂಖ್ಯೆ 2ರ (ಎ), (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಿಗೆ ಸೇರಿರುವ ನೌಕರರು ಬಯಸಿದಲ್ಲಿ, ಈ ನಿಯಮಗಳಲ್ಲಿ ಗೊತ್ತುಪಡಿಸಲಾದ ಕನಿಷ್ಠ ಸೇವಾ ಅವಧಿಯನ್ನು ಒಂದು ವರ್ಷದವರೆಗೆ ಕಡಿತಗೊಳಿಸಬಹುದು. ಈ ಸೌಲಭ್ಯವನ್ನು ಸಾಮಾನ್ಯವಾಗಿ ಸಂಪೂರ್ಣ ಸೇವಾ ಅವಧಿಯಲ್ಲಿ ಕೇವಲ ಒಂದು ಬಾರಿ ಮಾತ್ರ ಬಳಸಿಕೊಳ್ಳತಕ್ಕದ್ದು:

ಪರಂತು,-

(i) ಒಬ್ಬ ನೌಕರ ಅಥವಾ ಆತನ ಪತಿ/ಪತ್ನಿ ಅಥವಾ ಮಕ್ಕಳು ಗಂಭೀರ ಕಾಯಿಲೆಯಿಂದ ಬಳಲುತ್ತಿರುವಲ್ಲಿ, ಸಂಬಂಧಿತ ನೌಕರನು ಈ ನಿಯಮಗಳ ಅಡಿಯಲ್ಲಿ ನಿಗದಿತ ನಮೂನೆಗಳಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ಸರ್ಕಾರದ ವಿಶೇಷ ಸಂಸ್ಥೆಗಳಿಂದ ಕಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ ಮತ್ತು ಆ ನೌಕರನು ಪ್ರಸ್ತುತ ಕೆಲಸ ಮಾಡುತ್ತಿರುವ ಸ್ಥಳದಲ್ಲಿ ಅಗತ್ಯವಿರುವ ಚಿಕಿತ್ಸೆ ಲಭ್ಯವಿಲ್ಲ ಎಂಬ ಅಂಶವನ್ನು ದೃಢೀಕರಿಸುವ ಪ್ರಮಾಣಪತ್ರವನ್ನು ಹಾಜರುಪಡಿಸಿದರೆ, ಉಪ-ನಿಯಮ (1) ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವಾ ಅವಧಿಯು ಅನ್ವಯಿಸತಕ್ಕದ್ದಲ್ಲ;

(ii) ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ಸರ್ಕಾರದ ವಿಶೇಷ ಸಂಸ್ಥೆಗಳಿಂದ ಕಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸುವ ಪ್ರಸ್ತುತ ಕೆಲಸದ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂಬ ಬಗ್ಗೆ ಮತ್ತು ಅಗತ್ಯ ಚಿಕಿತ್ಸೆ ಲಭ್ಯವಿರುವ ಸ್ಥಳವನ್ನು ನಿರ್ದಿಷ್ಟಪಡಿಸುವ ಹಾಗೂ ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ಅಂಥ ಸ್ಥಳಕ್ಕೆ ವರ್ಗಾವಣೆಯು ಅತ್ಯಗತ್ಯವಿದೆ ಎಂದು ದೃಢೀಕರಿಸುವ ಪ್ರಮಾಣಪತ್ರವನ್ನು ಸಂಬಂಧಿತ ನೌಕರನು ಹಾಜರುಪಡಿಸಿದ ಹೊರತು, ಈ ಉಪಬಂಧದ ಅಡಿಯಲ್ಲಿ ಯಾವುದೇ ವರ್ಗಾವಣೆಯನ್ನು ಪರಿಗಣಿಸತಕ್ಕದ್ದಲ್ಲ.

(2) ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವಾ ಅವಧಿಯನ್ನು ಪೂರೈಸಿದಂಥ ನೌಕರನು, ಈ ಕೆಳಕಂಡ ಸಂದರ್ಭಗಳಲ್ಲಿ ವರ್ಗಾವಣೆಯಿಂದ ವಿನಾಯಿತಿಗಳಿಗೊಳಪಟ್ಟಿರತಕ್ಕದ್ದು, ಎಂದರೆ:-

(i) ನಿವೃತ್ತಿಗೆ ಒಂದು ವರ್ಷಕ್ಕಿಂತ ಕಡಿಮೆ ಸೇವಾ ಅವಧಿ ಇರುವ ನೌಕರರು ಬಯಸಿದಲ್ಲಿ ಮತ್ತು ನಮೂನೆ-IX ರಲ್ಲಿ ಘೋಷಣೆಯನ್ನು ಸಲ್ಲಿಸಿದ ನೌಕರರನ್ನು ವರ್ಗಾವಣೆ ಮಾಡತಕ್ಕದ್ದಲ್ಲ.

(ii) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೇಂದ್ರ ಪದಾಧಿಕಾರಿಯಾಗಿರುವ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವಾ ಅವಧಿಯನ್ನು ಪೂರೈಸಿರುವ ನೌಕರರನ್ನು, ಅವರು ನಮೂನೆ-X ರಲ್ಲಿ ಕೋರಿಕೆ ಅಥವಾ ಘೋಷಣೆಯನ್ನು ಸಲ್ಲಿಸಿದ ಹೊರತು, ಅವರ ಪದಾವಧಿಯು ಮುಕ್ತಾಯವಾಗುವವರೆಗೆ ವರ್ಗಾವಣೆ ಮಾಡತಕ್ಕದ್ದಲ್ಲ.

(iii) ನಿಗದಿತ ಮಾನದಂಡವುಳ್ಳ ಅಂಗವಿಕಲನೌಕರರ ವ್ಯಕ್ತಿಗಳನ್ನು ಅವರ ಕೋರಿಕೆಯಿಲ್ಲದೆ ವರ್ಗಾವಣೆ ಮಾಡತಕ್ಕದ್ದಲ್ಲ.

(iv) ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಅವರ ಕೋರಿಕೆಯಿಲ್ಲದೆ ವರ್ಗಾವಣೆ ಮಾಡತಕ್ಕದ್ದಲ್ಲ.

(3) ಅಮಾನತ್ತು/ಶಿಸ್ತು ವ್ಯವಹರಣೆಗಳು/ಕ್ರಿಮಿನಲ್ ವ್ಯವಹರಣೆಗಳಿಗೆ ಒಳಗಾಗಿರುವ ನೌಕರರ ಪುನಸ್ಥಾಪನೆ ಮತ್ತು ಸ್ಥಳ ನಿಯುಕ್ತಿ ಯಾವುದಾದರೂ ಇದ್ದಲ್ಲಿ, ಅದನ್ನುಅವನು ಅಮಾನತ್ತುಗೊಳ್ಳುವ ಮೊದಲು ಮತ್ತು/ಅಥವಾ ಶಿಸ್ತು ವ್ಯವಹರಣೆಗಳು /ಕ್ರಿಮಿನಲ್ ವ್ಯವಹರಣೆಗಳು ಪ್ರಾರಂಭವಾಗುವ ಮೊದಲು ಕೆಲಸ ಮಾಡುತ್ತಿದ್ದ ಸ್ಥಳವನ್ನು ಹೊರತುಪಡಿಸಿ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಮಾಡತಕ್ಕದ್ದು ಮತ್ತು ಅಂತಹ ವ್ಯಾಜ್ಯ ಕಾರಣವಾದ ಸ್ಥಳಕ್ಕೆ ಮಾಡತಕ್ಕದ್ದಲ್ಲ. ಅಂಥ ಸ್ಥಳ ನಿಯುಕ್ತಿಗಳನ್ನು ಅಂಥ ಸಂದರ್ಭಗಳು ಎದುರಾದಾಗ ವರ್ಷದುದ್ದಕ್ಕೂ ಮಾಡತಕ್ಕದ್ದು.

7. ಆದ್ಯತಾ ಪಟ್ಟಿಗಳ ತಯಾರಿಕೆ: (1) ನೌಕರರಿಗೆ ಸಂಬಂಧಿಸಿದಂತೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆಗಳನ್ನು, ಆದ್ಯತಾ ಪಟ್ಟಿಯಂತೆ ಪ್ರಸ್ತುತ ನಿಯುಕ್ತಿಗೊಂಡ ಸ್ಥಳವನ್ನು ಹೊರತುಪಡಿಸಿ, ವರ್ಗಾವಣೆಗಾಗಿ ಪಟ್ಟಿ ಮಾಡಲಾದ ಯಾವುದೇ ಇತರ ಶಾಲೆ ಅಥವಾ ಕಾಲೇಜುಗಳನ್ನು ಆಯ್ಕೆ ಮಾಡಲು ಅವರಿಗೆ ಅವಕಾಶ ನೀಡುವ ಮೂಲಕ ಮಾಡತಕ್ಕದ್ದು. ಇತರ ವರ್ಗಗಳ ನೌಕರರ ವರ್ಗಾವಣೆಯಿಂದಾಗಿ ಸ್ಥಳಾಂತರಗೊಂಡ ನೌಕರರಿಗೆ, ಈ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶೇಕಡಾ 11ರ ಮಿತಿಯೊಳಗೆ ಸ್ಥಳನಿಯುಕ್ತಿಗೊಳಿಸುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

(2) ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಒಂದು ಸ್ಥಳದಲ್ಲಿ ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ನೌಕರರ ಆದ್ಯತಾ ಪಟ್ಟಿಗಳನ್ನು ಮತ್ತು ನಿಯಮ 3ರ ಉಪ-ನಿಯಮ (3) ರ ಅಡಿಯಲ್ಲಿ ವರ್ಗಾವಣೆಗಾಗಿ ವಿನಂತಿಸಿದ ನೌಕರರ ಮತ್ತು ಶಾಲೆ ಅಥವಾ ಕಾಲೇಜುಗಳ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಸಂಬಂಧಿಸಿದಂತೆ ಈಗಿನ ನಿಯತ ಸ್ಥಳ ನಿಯುಕ್ತಿಯಲ್ಲಿ ನಿಯಮ 6 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಯ ಸಡಿಲಿಕೆಯನ್ನು (ಕಡಿತ) ಪಡೆಯಲು ಬಯಸುವ ನೌಕರರ ಪ್ರತ್ಯೇಕ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ಪ್ರತಿ ಜ್ಯೇಷ್ಠತಾ ಘಟಕದೊಳಗೆ, ಈ ನಿಯಮಗಳ ಅಡಿಯಲ್ಲಿಪ್ರತಿಯೊಂದು ವರ್ಗಕ್ಕೆ ಪ್ರತ್ಯೇಕವಾಗಿ ಆದ್ಯತಾ ಪಟ್ಟಿಗಳನ್ನು ತಯಾರಿಸತಕ್ಕದ್ದು. ನಿಯಮ 4ರ ಅಡಿಯಲ್ಲಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಲೆಕ್ಕಹಾಕಿದ ವೇಟೇಜ್ (weightage) ಆಧಾರದ ಮೇಲೆ ಈ ಮುಂದಿನ ಆದ್ಯತಾ ಕ್ರಮದಲ್ಲಿ ವರ್ಗಾವಣೆಗಳನ್ನು ಮಾಡತಕ್ಕದ್ದು. ಬೇರೆ ಬೇರೆ ನೌಕರರು ಸಮಾನ ವೇಟೇಜ್ (weightage) ಪಡೆದ ಸಂದರ್ಭದಲ್ಲಿ, ಆದ್ಯತಾ ಪಟ್ಟಿಯನ್ನುಈ ಮುಂದಿನ ಕ್ರಮದಲ್ಲಿ ತಯಾರಿಸತಕ್ಕದ್ದು, ಎಂದರೆ:

(i) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ ಪ್ರಕರಣಗಳು.

(ii) ಗಂಭೀರ ಕಾಯಿಲೆ ಇರುವ ಪ್ರಕರಣಗಳು.

(iii) ಒಂಟಿ ಮಹಿಳೆ ಅಥವಾ ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊಂದಿರುವ ಒಂಟಿ ಪೋಷಕರು ಅಥವಾ ನಿಗದಿತ ಮಾನದಂಡವುಳ್ಳ ಅಂಗವಿಕಲತೆ ಹೊಂದಿರುವ ದೈಹಿಕ ಅವಲಂಬಿತ ಪತಿ/ಪತ್ನಿ ಅಥವಾ ಮಕ್ಕಳನ್ನು ಹೊಂದಿರುವ ನೌಕರರ ಪ್ರಕರಣಗಳು.

(iv) ಪತಿ/ಪತ್ನಿ ಪ್ರಕರಣಗಳು.

(v) ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗಳು.

(vi) ಖಂಡ (i) ರಿಂದ (iv) ಅನ್ನು ಹೊರತುಪಡಿಸಿ ಸ್ವಂತ ಕೋರಿಕೆಗಳಿಗೆ ಸಂಬಂಧಪಟ್ಟ ಪ್ರಕರಣಗಳು.

(4) ತಮ್ಮ ಪ್ರಸ್ತುತ ಕೆಲಸದ ಸ್ಥಳದಲ್ಲಿ ಸುದೀರ್ಘ ಸೇವೆಸಲ್ಲಿಸಿದ ನೌಕರರನ್ನು ಆದ್ಯತೆ ಆಧಾರದ ಮೇಲೆ ಪರಿಗಣಿಸತಕ್ಕದ್ದು, ಮತ್ತು ಸೇವಾವಧಿಯು ಸಮಾನವಾಗಿದ್ದಾಗ, ನೌಕರನ ವಯಸ್ಸನ್ನು ಪರಿಗಣನೆಯ ಮಾನದಂಡವಾಗಿ ತೆಗೆದುಕೊಳ್ಳತಕ್ಕದ್ದು (ವಯಸ್ಸಿನಲ್ಲಿಕಿರಿಯನಿಗಿಂತ ವಯಸ್ಸಿನಲ್ಲಿ ಹಿರಿಯ ನೌಕರನು ಮೊದಲ ಪ್ರಾಶಸ್ತ್ಯ ಪಡೆಯಬಹುದು).

(5) ಸಕ್ಷಮ ಪ್ರಾಧಿಕಾರವು,ಮೇಲೆ ನಿರ್ದಿಷ್ಟಪಡಿಸಿದ ಕಾರ್ಯವಿಧಾನದಂತೆ ತಾತ್ಕಾಲಿಕ ಆದ್ಯತಾ ಪಟ್ಟಿಗಳನ್ನು ತಯಾರಿಸತಕ್ಕದ್ದು ಮತ್ತು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಕ್ಷಮ ಪ್ರಾಧಿಕಾರವು ಅವುಗಳ ಸಲ್ಲಿಕೆಗಾಗಿ ಸಮಯವನ್ನು ಅಧಿಸೂಚಿಸತಕ್ಕದ್ದು. ನೌಕರರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ, ಅವುಗಳನ್ನು ಈ ನಿಯಮಗಳ ಅನುಗುಣವಾಗಿ ಪರಿಗಣಿಸಿ ಅಥವಾ ತಿರಸ್ಕರಿಸಿ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

8. ಕೌನ್ಸೆಲಿಂಗ್ ನಡೆಸುವ ಪ್ರಕ್ರಿಯೆ.-(1) ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮೊದಲು, ಮಂಜೂರಾದ ಹುದ್ದೆಗಳ ಸಂಖ್ಯೆ, ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಬಲ ಮತ್ತು ಖಾಲಿ ಇರುವ ಹುದ್ದೆಗಳು, ಒಂದು ಸ್ಥಳದಲ್ಲಿ ಹುದ್ದೆಯಲ್ಲಿ ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸಿದವರ ಪ್ರಸ್ತಾವಿತ ವರ್ಗಾವಣೆಗಳಿಂದ ಉದ್ಭವಿಸುವ ತತ್ಪರಿಣಾಮದ ಖಾಲಿ ಹುದ್ದೆಗಳನ್ನು **ನಮೂನೆ-1**ರಲ್ಲಿ ನಿರ್ದಿಷ್ಟಪಡಿಸಿದಂತಹ ಪ್ರಪತ್ರದಲ್ಲಿಅಧಿಸೂಚಿಸತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತಹ ವರ್ಗಗಳಿಗೆ ಸೇರಿದ ನೌಕರರ ಕೋರಿಕೆಯ ಮೇರೆಗಿನ ವರ್ಗಾವಣೆಗಾಗಿ ಅರ್ಜಿಯನ್ನು ಅಧಿಸೂಚಿಸತಕ್ಕದ್ದು.

(3) ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕೌನ್ಸೆಲಿಂಗ್ ಮೂಲಕ ಕಡ್ಡಾಯ ವರ್ಗಾವಣೆಯ ಮೂಲಕ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ಸಕ್ಷಮ ಪ್ರಾಧಿಕಾರವು ಅಧಿಸೂಚಿಸತಕ್ಕದ್ದು.

(4) ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ವರ್ಗಾವಣೆ ಅರ್ಜಿಯಲ್ಲಿ ಒದಗಿಸಲಾದ ಮಾಹಿತಿಯು ತಪ್ಪೆಂದು ಕಂಡುಬಂದಲ್ಲಿ, ಅದನ್ನು ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮಗಳು, 2021ರಅಡಿಯಲ್ಲಿ ದುರ್ನಡತೆ ಎಂದು ಪರಿಗಣಿಸತಕ್ಕದ್ದು ಮತ್ತು ಸಂಬಂಧಪಟ್ಟ ನೌಕರನ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಪ್ರಕಾರ ಸೂಕ್ತಶಿಸ್ತು ಕ್ರಮವನ್ನು ಪ್ರಾರಂಭಿಸತಕ್ಕದ್ದು.

(5) ನೌಕರರು ಆಯಾ ಸಕ್ಷಮ ಪ್ರಾಧಿಕಾರಗಳಿಂದ ಸೂಚನೆಗಳನ್ನು ಸ್ವೀಕರಿಸಿದ ನಂತರ ಕೌನ್ಸೆಲಿಂಗ್‌ಗೆ ಹಾಜರಾಗಿ ಈ ನಿಯಮಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಗಳು ಹಂಚಿಕೆ ಮಾಡಿದ ಸಮಯದೊಳಗೆ ಪ್ರದರ್ಶಿಸಲಾದ ಯಾವುದೇ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಅಧಿಸೂಚಿತ ಕಾಲಮಿತಿಯಂತೆ ಕೋರಿಕೆಯ ಮೇರೆಗೆ ಕೌನ್ಸೆಲಿಂಗ್‌ಗೆ ಹಾಜರಾಗಲು ವೇಳೆಯನ್ನು ನಿಗದಿಯಾಗಿದ್ದ ನೌಕರನು ಕೌನ್ಸೆಲಿಂಗ್‌ಗೆ ಹಾಜರಾಗದಿದ್ದರೆ ಮತ್ತು ನಿಗದಿಪಡಿಸಿದ ಸಮಯದೊಳಗೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ವಿಫಲನಾದರೆ, ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಆ ನೌಕರನನ್ನು ಕಡ್ಡಾಯ ವರ್ಗಾವಣೆ ಮಾಡಿದ ಹೊರತು, ನೌಕರನು ಈಗಿರುವ ಕೆಲಸದ ಸ್ಥಳದಲ್ಲಿಯೇ ಮುಂದುವರಿಯುತ್ತಾನೆ ಎಂದು ಭಾವಿಸತಕ್ಕದ್ದು:

ಪರಂತು, ಸಾರ್ವಜನಿಕ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗಾಗಿ ಕೌನ್ಸೆಲಿಂಗ್‌ಗೆ ಹಾಜರಾಗಲು ವೇಳೆಯನ್ನು ನಿಗದಿಯಾಗಿದ್ದ ನೌಕರನು ಕೌನ್ಸೆಲಿಂಗ್‌ಗೆ ಹಾಜರಾಗದಿದ್ದರೆ ಅಥವಾ ಹಾಜರಾಗಿ ನಿಗದಿಪಡಿಸಿದ ಸಮಯದೊಳಗೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ವಿಫಲನಾದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗಾಗಿ ಸದರಿ ನೌಕರನನ್ನು ವರ್ಗಾವಣೆ ಮಾಡಲು ಮತ್ತು ಕೌನ್ಸೆಲಿಂಗ್‌ನ ಕೊನೆಯಲ್ಲಿ ಪ್ರದರ್ಶಿಸಲಾದ ಯಾವುದೇ ಸ್ಥಳಗಳಿಗೆ ನಿಯುಕ್ತಿಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

ಅಲ್ಲದೆ, ನೌಕರನು ವರ್ಗಾವಣೆಯ ಮೂಲಕ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದರೆ, ಅದನ್ನು ದುರ್ನಡತೆ ಎಂದು ಪರಿಗಣಿಸತಕ್ಕದ್ದು ಮತ್ತು ಸದರಿ ನೌಕರನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ಮತ್ತು ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮಗಳು, 2021ರಅಡಿಯಲ್ಲಿ ಸೂಕ್ತ ಶಿಸ್ತು ಕ್ರಮಕ್ಕೆ ಗುರಿಪಡಿಸತಕ್ಕದ್ದು.

(6) ನಿಯಮ-8ರ ಉಪ-ನಿಯಮ (3)ರಲ್ಲಿ ಅಧಿಸೂಚಿಸಿದಂತೆ ಕೌನ್ಸೆಲಿಂಗ್ ಮೂಲಕ ಭರ್ತಿ ಮಾಡಲು ಪ್ರದರ್ಶಿಸಲಾದ ನೌಕರರ ಹುದ್ದೆಗಳು/ಖಾಲಿ ಹುದ್ದೆಗಳು, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ವಿತಿಗಳೊಳಗೆ

ನೌಕರರ ಕಡ್ಡಾಯ ವರ್ಗಾವಣೆಯಿಂದ ಉದ್ಭವಿಸುವ ಖಾಲಿ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು. ಕೋಷ್ಟಕದ ಕ್ರಮ ಸಂಖ್ಯೆ-2ರ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ)ನಲ್ಲಿ ನಿರ್ದಿಷ್ಟಪಡಿಸಿದ ವರ್ಗಗಳಿಗೆ ಸೇರಿದ ನೌಕರರಿಗೆ ಅಧಿಸೂಚಿಸಲಾದ ಮತ್ತು ಪ್ರದರ್ಶಿಸಲಾದ ಹುದ್ದೆಗಳನ್ನು ಕೌನ್ಸೆಲಿಂಗ್ ಮೂಲಕ ಆಯ್ಕೆ ಮಾಡಲು ಅನುಮತಿಸಲಾಗುವುದು. ಆದರೆ, ಸದರಿ ನೌಕರನು ಈಗಿರುವ ಕೆಲಸದ ಸ್ಥಳದಲ್ಲಿಯೇ ಮುಂದುವರಿಯಲು ಬಯಸಿದರೆ, ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕೌನ್ಸೆಲಿಂಗ್ ಮೂಲಕ ಅವನನ್ನು ಕಡ್ಡಾಯವಾಗಿ ವರ್ಗಾವಣೆ ಮಾಡಿದ ಹೊರತು ಅವನನ್ನು ಅಲ್ಲಿಯೇ ಮುಂದುವರಿಸತಕ್ಕದ್ದು. ಅಲ್ಲದೆ, ಕೌನ್ಸೆಲಿಂಗ್ ಮೂಲಕ ನೌಕರನು ಪ್ರದರ್ಶಿತ ಹುದ್ದೆಯನ್ನು ಆಯ್ಕೆ ಮಾಡಿದ ನಂತರ, ಮುಂದಿನ ಕೌನ್ಸೆಲಿಂಗ್‌ಗಾಗಿ ಪ್ರದರ್ಶಿತ ಹುದ್ದೆಗಳ ಪಟ್ಟಿಯಿಂದ ಸದರಿ ಹುದ್ದೆಯನ್ನು ತೆಗೆದುಹಾಕತಕ್ಕದ್ದು.

(7) ಕೋಷ್ಟಕದ ಕ್ರಮ ಸಂಖ್ಯೆ 2 ರ ನಿಯಮ-4 ರ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ) ನಲ್ಲಿ ನಿರ್ದಿಷ್ಟಪಡಿಸಿದ ವರ್ಗಗಳಿಗೆ ಸೇರಿದ ನೌಕರರಿಗೆ ಮೊದಲಸುತ್ತಿನ ಕೌನ್ಸೆಲಿಂಗ್ ನಂತರ, ಸಕ್ಷಮ ಪ್ರಾಧಿಕಾರವು ಎರಡನೇ ಸುತ್ತಿನ ಕೌನ್ಸೆಲಿಂಗ್ ಮೂಲಕಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ಮೊದಲ ಸುತ್ತಿನ ಕೌನ್ಸೆಲಿಂಗ್ ನಂತರ ಉಂಟಾದ ಖಾಲಿಹುದ್ದೆಗಳನ್ನು ಪರಿಗಣನೆಗೆ ತೆಗೆದುಕೊಂಡು ಅಧಿಸೂಚಿಸತಕ್ಕದ್ದು ಮತ್ತು ಪ್ರದರ್ಶಿಸತಕ್ಕದ್ದು. ನಂತರ ಸದರಿ ಕೋಷ್ಟಕದ ಕ್ರಮ ಸಂಖ್ಯೆ 2 ರ ನಿಯಮ-4 ರ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ)ನಲ್ಲಿ ನಿರ್ದಿಷ್ಟಪಡಿಸಿದ ವರ್ಗಗಳಿಗೆ ಸೇರಿದ ನೌಕರರಿಗೆ ಎರಡನೇ ಸುತ್ತಿನ ಕೌನ್ಸೆಲಿಂಗ್ ಅನ್ನು ನಡೆಸತಕ್ಕದ್ದು.

(8) ಎರಡನೇ ಸುತ್ತಿನ ಕೌನ್ಸೆಲಿಂಗ್ ಪೂರ್ಣಗೊಂಡ ನಂತರ, ಸಕ್ಷಮ ಪ್ರಾಧಿಕಾರವು ಉಳಿದ ಹುದ್ದೆಗಳು ಅಥವಾ ಖಾಲಿ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಮೊದಲ ಎರಡು ಸುತ್ತಿನ ಕೌನ್ಸೆಲಿಂಗ್‌ಗಳಲ್ಲಿ ಉಂಟಾದ ಖಾಲಿ ಹುದ್ದೆಗಳ ಆಧಾರದ ಮೇಲೆ ಅಧಿಸೂಚಿಸತಕ್ಕದ್ದು ಮತ್ತು ಪ್ರದರ್ಶಿಸತಕ್ಕದ್ದು. ತದನಂತರ, ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಕಡ್ಡಾಯವಾಗಿ ವರ್ಗಾವಣೆ ಮಾಡಬೇಕಾದ ಮತ್ತು ಯಾರ ವಿರುದ್ಧ ಶಿಸ್ತು ಅಥವಾ ಕ್ರಿಮಿನಲ್ ವ್ಯವಹರಣೆಗಳು ಬಾಕಿ ಉಳಿದಿವೆಯೋ ಮತ್ತು ಅವನು ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸದಿದ್ದರೂ ವರ್ಗಾವಣೆ ಮಾಡಬಹುದುಎಂಬ ಅಭಿಪ್ರಾಯವನ್ನು ನೇಮಕಾತಿ ಪ್ರಾಧಿಕಾರವು ಹೊಂದಿದ್ದಲ್ಲಿ ಅಂಥ ನೌಕರರಿಗೆ ಕೌನ್ಸೆಲಿಂಗ್ ನಡೆಸತಕ್ಕದ್ದು. ಅಲ್ಲದೆ, ನೌಕರನು ಕೌನ್ಸೆಲಿಂಗ್ ಮೂಲಕ ಪ್ರದರ್ಶಿತ ಹುದ್ದೆಯನ್ನು ಆಯ್ಕೆ ಮಾಡಿದ ನಂತರ, ಮುಂದಿನ ಕೌನ್ಸೆಲಿಂಗ್‌ಗಾಗಿ ಪ್ರದರ್ಶಿತ ಹುದ್ದೆಗಳ ಪಟ್ಟಿಯಿಂದ ಸದರಿ ಹುದ್ದೆಯನ್ನು ತೆಗೆದುಹಾಕತಕ್ಕದ್ದು.

(9) ನಿಯಮಿಸಿದ ಕೋಟಾವನ್ನು ತಲುಪಿದ ನಂತರ ವರ್ಗಾವಣೆ ಪ್ರಕ್ರಿಯೆಯು ಕೊನೆಗೊಳ್ಳತಕ್ಕದ್ದು.

9. ಆದೇಶಗಳನ್ನು ಹೊರಡಿಸುವುದು:- ಪ್ರಕ್ರಿಯೆಯು ಕ್ರಮಬದ್ಧವಾಗಿ ಪೂರ್ಣಗೊಂಡನಂತರ ಕೌನ್ಸೆಲಿಂಗ್‌ನಲ್ಲಿ ಸಕ್ಷಮ ಪ್ರಾಧಿಕಾರಗಳ ಮೂಲಕ ಆಯ್ಕೆ

ಮಾಡಿಕೊಂಡ ಅಥವಾ ಹಂಚಿಕೆ ಮಾಡಲ್ಪಟ್ಟ ಹುದ್ದೆಗೆ ಸಂಬಂಧಿಸಿದಂತೆ ಕೋರಿಕೆಯ ಮೇರೆಗೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿದ ನೌಕರರ ವರ್ಗಾವಣೆಯ ಆದೇಶಗಳನ್ನು ಸಕ್ಷಮ ಪ್ರಾಧಿಕಾರಗಳು ಹೊರಡಿಸತಕ್ಕದ್ದು. ವರ್ಗಾವಣೆ ಆದೇಶದ ಪ್ರತಿಗಳನ್ನು ನೀಡಿ ಸಕ್ಷಮ ಪ್ರಾಧಿಕಾರಗಳ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು. ಯಾವೊಬ್ಬ ನೌಕರನೂ ಸ್ಥಳ ನಿಯುಕ್ತಿ ಇಲ್ಲದೆ ಉಳಿಯದಿರುವುದಿಲ್ಲ ಎಂಬುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

10. ವರ್ಗಾವಣೆ ಅವಧಿ:ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಅಥವಾ ಕೋರಿಕೆಯಮೇರೆಗೆ ಮಾಡಿದ ಎಲ್ಲಾ ವರ್ಗಾವಣೆಗಳನ್ನು ಸಾಮಾನ್ಯವಾಗಿ ಕ್ಯಾಲೆಂಡರ್ ವರ್ಷದ ಏಪ್ರಿಲ್‌ನಿಂದಜೂನ್ ತಿಂಗಳ ನಡುವೆ ಅಥವಾ ಅಸಾಧಾರಣ ಸಂದರ್ಭಗಳಲ್ಲಿ ಸರ್ಕಾರವು ಅಧಿಸೂಚಿಸಿದಂತೆ ಮಾಡತಕ್ಕದ್ದು:

ಪರಂತು, ಮೇಲಿನ ವರ್ಗಾವಣೆ ಅವಧಿಯು ನಿಯಮ 11 ಮತ್ತು 12ರಅಡಿಯಲ್ಲಿ ಬರುವ ಪ್ರಕರಣಗಳಿಗೆ ಅನ್ವಯಿಸತಕ್ಕದ್ದಲ್ಲ.

11. ಸಕ್ಷಮ ಪ್ರಾಧಿಕಾರಗಳ ಅಧಿಕಾರಗಳು:- ಈ ನಿಯಮಗಳಲ್ಲಿ ಏನೇ ಇದ್ದರೂ, ಯಾರೇ ನೌಕರನ ವಿರುದ್ಧ ದುರ್ನಡತೆ ಅಥವಾ ಹಣದ ದುರ್ವಿನಿಯೋಗ ಅಥವಾ ಯಾವುದೇ ಶಿಸ್ತು ಕ್ರಮ ಇರುವ ಪ್ರಕರಣದಲ್ಲಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಶಾಲೆ ಅಥವಾ ಕಾಲೇಜಿನ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಅವರ ಹುದ್ದೆಯ ಸ್ಥಳ ನಿಯುಕ್ತಿಯ ಜಾಗದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದ ಯಾವುದೇ ಸ್ಥಳಕ್ಕೆ ವರ್ಗಾಯಿಸಬಹುದು. ಗಂಭೀರ ಕಾಯಿಲೆ ಇರುವ ವ್ಯಕ್ತಿಗಳ ವರ್ಗಕ್ಕೆ ಸೇರಿದ ನೌಕರರನ್ನು ಹೊರತುಪಡಿಸಿ, ಅಂಥ ನೌಕರರು ಅವರ ಮೇಲೆ ದಂಡನೆಯನ್ನು ವಿಧಿಸಿದ ಪರಿಣಾಮವಾಗಿ ಕೌನ್ಸೆಲಿಂಗ್‌ಗಾಗಿ ಮೊದಲ ಅವಕಾಶದಲ್ಲಿ ಅವರ ಆಯ್ಕೆಯ ಸ್ಥಳವನ್ನು ಆಯ್ಕೆ ಮಾಡಲು ನಿರ್ಬಂಧಿಸತಕ್ಕದ್ದು.

12. ಕಲ್ಯಾಣ ಕರ್ನಾಟಕದ ನೌಕರರ ವರ್ಗಾವಣೆ:-ಕಲ್ಯಾಣ ಕರ್ನಾಟಕ ಪ್ರದೇಶಕ್ಕೆಸಂಬಂಧಿಸಿದಂತೆ ಭಾರತದ ಸಂವಿಧಾನದ ಅನುಚ್ಛೇದ371-ಜೆ ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎಜಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು
ವಕ್ಫ್ ಇಲಾಖೆ

ಅನುಸೂಚಿ

ಕೋಷ್ಟಕ-I

(ನಿಯಮ 2 ರ ಉಪನಿಯಮ (1) ರ (ಸಿ) ಖಂಡವನ್ನು ನೋಡಿ)

ನೇಮಕಾತಿ ಪ್ರಾಧಿಕಾರ

ಕ್ರ.ಸಂ	ಹುದ್ದೆಗಳವರ್ಗ	ನೇಮಕಾತಿ ಪ್ರಾಧಿಕಾರ
1	ಉಪನ್ಯಾಸಕರು	ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು
2	ಶಿಕ್ಷಕರು	ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು

ಕೋಷ್ಟಕ-II

(ನಿಯಮ 2 ರ ಉಪನಿಯಮ (1) ರ (ಡಿ) ಖಂಡವನ್ನು ನೋಡಿ)

ವರ್ಗಾವಣೆ ಪ್ರಕ್ರಿಯೆಗೆ ಸಕ್ಷಮ ಪ್ರಾಧಿಕಾರ

ಕ್ರ. ಸಂ	ಹುದ್ದೆಗಳ ವರ್ಗ	ವ್ಯಂದ	ಸಕ್ಷಮ ಪ್ರಾಧಿಕಾರ
1	ಉಪನ್ಯಾಸಕರು	ಬೋಧಕ ವರ್ಗ	ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು
2	ಶಿಕ್ಷಕರು	ಬೋಧಕ ವರ್ಗ (ಗ್ರೂಪ್ ಸಿ)	ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು

ಕೋಷ್ಠಕ-III

ವಿನಾಯಿತಿ ಪಡೆಯಲು ಪ್ರಮಾಣ ಪತ್ರಗಳನ್ನು ನೀಡುವ ಪ್ರಾಧಿಕಾರಗಳು

ಕ್ರಮ ಸಂಖ್ಯೆ	ಕ್ಲೇಮು ಮಾಡಲಾದ ಆದ್ಯತೆ ಅಥವಾ ವಿನಾಯಿತಿ	ಪೂರಕ ದಸ್ತಾವೇಜುಗಳು
1.	ಸರ್ಕಾರ ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳು (ಪಿ.ಎಸ್.ಯು) ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟ	ನೇಮಕಾತಿ ಪ್ರಾಧಿಕಾರದಿಂದ ಪತಿ/ಪತ್ನಿ ಪ್ರಮಾಣಪತ್ರ (ನಮೂನೆ-VIII)

	ಯಾವುದೇ ಸಂಘ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ವ್ಯಕ್ತಿಯನ್ನು ವಿವಾಹವಾಗಿರುವ ನೌಕರ	
2.	(i) ಮಾರಣಾಂತಿಕ ಕಾಯಿಲೆ /ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ನೌಕರ; (ii) ಕಾಯಿಲೆ/ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಉದ್ಯೋಗಿಯ ನೇರ ಅವಲಂಬಿತರು	ಜಿಲ್ಲಾ ವೈದ್ಯಕೀಯ ಮಂಡಳಿ/ವಿಶೇಷ ಸರ್ಕಾರಿ ಸಂಸ್ಥೆಗಳಿಂದ ಪ್ರಮಾಣ ಪತ್ರ (ಮೊಹರು ಮತ್ತು ಸಹಿ) (ನಮೂನೆ-II) ಜಿಲ್ಲಾ ವೈದ್ಯಕೀಯ ಮಂಡಳಿ/ವಿಶೇಷ ಸರ್ಕಾರಿ ಸಂಸ್ಥೆಗಳಿಂದ ಪ್ರಮಾಣ ಪತ್ರ (ಮೊಹರಿನೊಂದಿಗೆ ಸಹಿಗಳು) (ನಮೂನೆ-III)
3.	ಅಂಗವಿಕಲತೆಯ ಪ್ರಮಾಣ ಪತ್ರ	ಯು.ಡಿ.ಐ.ಡಿ ಕಾರ್ಡ್ ಮತ್ತು ವೈದ್ಯಕೀಯ ಮಂಡಳಿಯ ಸದಸ್ಯರು, ವೈದ್ಯಕೀಯ ಅಧೀಕ್ಷಕರು/ಮುಖ್ಯ ವೈದ್ಯಾಧಿಕಾರಿ/ಆಸ್ಪತ್ರೆಯ ಮುಖ್ಯಸ್ಥರ ಸಹಿ ಮತ್ತು ಮೊಹರನ್ನು ಹೊಂದಿರುವ ದೃಢೀಕರಣ ಪ್ರಮಾಣ ಪತ್ರ (ನಮೂನೆ-IV).
4.	ಅಂಗೀಕೃತ ಉದ್ಯೋಗಿ ಅಥವಾ ನೌಕರರ ಸಂಘದ ಚುನಾಯಿತ ಪದಾಧಿಕಾರಿ. ಉದ್ಯೋಗಿಯು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿದ್ದಲ್ಲಿ.	ಅಂಗೀಕೃತ ಸಂಘದ ರಾಜ್ಯಾಧ್ಯಕ್ಷರಿಂದ ಪ್ರಮಾಣಪತ್ರ (ನಮೂನೆ-X) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಿಂದ ಪ್ರಮಾಣ ಪತ್ರ (ನಮೂನೆ-X)
5.	ಒಂಟಿ ಮಹಿಳೆ/ವಿಧವೆ/ ಏಕಪೋಷಕ-ಪೋಷಕಿ ನೌಕರರು	ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ನ್ಯಾಯಾಲಯ ಡಿಕ್ರಿ, ಪತಿ/ಪತ್ನಿಯ ಮರಣ ಪ್ರಮಾಣಪತ್ರ (ನಮೂನೆ-V, ನಮೂನೆ-VI ಮತ್ತು ನಮೂನೆ-VII)

(ಎಸ್.ಎಜಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು
ವಕ್ಫ್ ಇಲಾಖೆ

ನಮೂನೆ-I

(2ನೇ ನಿಯಮದ (1)ನೇ ಉಪ ನಿಯಮದ (ಒ) ಖಂಡವನ್ನು ಮತ್ತು 8ನೇ ನಿಯಮದ (1)ನೇ ಉಪನಿಯಮವನ್ನು ನೋಡಿ)

ಪ್ರಪತ್ರ-I

ಶಿಕ್ಷಕರು ಮತ್ತು ಉಪನ್ಯಾಸಕರ ವೃಂದಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆ

ವೃಂದ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು

ಪ್ರಪತ್ರ-II

ಕನಿಷ್ಠ ನಿಗದಿತ ಅವಧಿಯ ಸೇವೆಯನ್ನು ಪೂರ್ಣಗೊಳಿಸಿದ ನೌಕರರ ವರ್ಗಾವಣೆಯಿಂದ ಉದ್ಭವಿಸಬಹುದಾದಖಾಲಿ ಹುದ್ದೆಗಳು

ವೃಂದ	ಖಾಲಿ ಹುದ್ದೆಯು ಇರುವ ಸ್ಥಳ

ನಮೂನೆ-II

(6ನೇ ನಿಯಮದ (1)ನೇ ಉಪ ನಿಯಮದ (i)ನೇ ಖಂಡವನ್ನು ನೋಡಿ)

ವೈದ್ಯಕೀಯ ಪ್ರಮಾಣ ಪತ್ರ

(ಗಂಭೀರ ಕಾಯಿಲೆಗಳಿಗಾಗಿ)

ಹೆಸರು:

ಕಾಯಿಲೆಯ ಸ್ವರೂಪ:

ಎಷ್ಟು ವರ್ಷಗಳಿಂದ ಆ ಕಾಯಿಲೆಯಿಂದ ಬಳಲುತ್ತಿದ್ದಾರೆ:___

ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ವಿಶೇಷ ಸರ್ಕಾರಿ ಸಂಸ್ಥೆಯು ನೀಡುವ ಪ್ರಮಾಣಪತ್ರ

ಶ್ರೀ/ಶ್ರೀಮತಿ ---------- ವಯಸ್ಸು ಸುಮಾರು ---------- ಆದ ನಾನು, ಕರ್ನಾಟಕ ಸರ್ಕಾರವು ಅಧಿಸೂಚಿಸಿರುವ ಗಂಭೀರ ಕಾಯಿಲೆಗಳ ಪಟ್ಟಿಯನುಸಾರ ---------- ಎಂಬ ಕಾಯಿಲೆಯಿಂದ ಬಳಲುತ್ತಿದ್ದೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಲಗತ್ತಿಸಲಾಗಿರುವ ವೈದ್ಯಕೀಯ ದಾಖಲೆಗಳು:

1)

2)

3)

ಸರ್ಕಾರಿ ನೌಕರರು ಕಾರ್ಯನಿರ್ವಹಿಸುತ್ತಿರುವ ಪ್ರಸಕ್ತ ಸ್ಥಳದಲ್ಲಿ ಚಿಕಿತ್ಸೆಯು ಲಭ್ಯವಿರುವುದಿಲ್ಲವೆಂದು ಸಹ ಪ್ರಮಾಣೀಕರಿಸಲಾಗಿದೆ. ಹಾಗಾಗಿ, ಚಿಕಿತ್ಸೆಯು ಲಭ್ಯವಿರುವ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳಕ್ಕೆ ಸಮೀಪದ ಕಾರ್ಯಸ್ಥಳ/ಗಳನ್ನು ಈ ಕೆಳಗೆ ಹೆಸರಿಸಲಾಗಿದೆ:

1)

2)

ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ವಿಶೇಷ ಸರ್ಕಾರಿ ಸಂಸ್ಥೆ (ಮೊಹರಿನೊಂದಿಗೆ ಸಹಿಗಳು)

ನಮೂನೆ-III

(6ನೇ ನಿಯಮದ (1)ನೇ ಉಪ ನಿಯಮದ (i)ನೇ ಖಂಡವನ್ನು ನೋಡಿ)

ವೈದ್ಯಕೀಯ ಪ್ರಮಾಣ ಪತ್ರ

(ಪತಿ/ಪತ್ನಿ ಅಥವಾ ಮಕ್ಕಳ ಗಂಭೀರ ಕಾಯಿಲೆಗಳಿಗಾಗಿ)

ಹೆಸರು:

---------- ರವರ ಪತ್ನಿ/ಪತಿ/ಮಗ/ಮಗಳು:

ಕಾಯಿಲೆಯ ಸ್ವರೂಪ:

ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ವಿಶೇಷ ಸರ್ಕಾರಿ ಸಂಸ್ಥೆಯು ನೀಡುವ ಪ್ರಮಾಣಪತ್ರ

ಶ್ರೀ/ಶ್ರೀಮತಿ ---------- (ನೌಕರರ ಹೆಸರು) ವಯಸ್ಸು ಸುಮಾರು ---------- ವರ್ಷಗಳು, ಆದ ನಾವು ಪತ್ನಿ/ಮಗ/ಮಗಳು ಆದ ಶ್ರೀ/ಶ್ರೀಮತಿ ---------- ಇವರು ಕರ್ನಾಟಕ ಸರ್ಕಾರವು ಅಧಿಸೂಚಿಸಿರುವ ಗಂಭೀರ ಕಾಯಿಲೆಗಳ ಪಟ್ಟಿಯನುಸಾರ ಇರುವ ---------- ಎಂಬ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ.

ಲಗತ್ತಿಸಲಾದ ವೈದ್ಯಕೀಯ ದಾಖಲೆಗಳು:

1)

2)

3)

ಸರ್ಕಾರಿ ನೌಕರರು ಕಾರ್ಯನಿರ್ವಹಿಸುತ್ತಿರುವ ಪ್ರಸಕ್ತ ಸ್ಥಳದಲ್ಲಿ ಚಿಕಿತ್ಸೆಯು ಲಭ್ಯವಿರುವುದಿಲ್ಲವೆಂದು ಸಹ ಪ್ರಮಾಣೀಕರಿಸಲಾಗಿದೆ. ಹಾಗಾಗಿ, ಚಿಕಿತ್ಸೆಯು ಲಭ್ಯವಿರುವ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳಕ್ಕೆ ಸಮೀಪದ ಕಾರ್ಯಸ್ಥಳ/ಗಳನ್ನು ಈ ಕೆಳಗೆ ಹೆಸರಿಸಲಾಗಿದೆ:

1)

2)

ಜಿಲ್ಲಾ ವೈದ್ಯಕೀಯ ಮಂಡಳಿ ಅಥವಾ ವಿಶೇಷ
ಸರ್ಕಾರಿ ಸಂಸ್ಥೆ (ಮೊಹರಿನೊಂದಿಗೆ ಸಹಿಗಳು)

ನಮೂನೆ-IV

(2ನೇ ನಿಯಮವನ್ನು ಮತ್ತು ಅನುಸೂಚಿಯ ಕೋಷ್ಠಕ-III ನ್ನು ನೋಡಿ)

ವಿಕಲಚೇತನ ಪ್ರಮಾಣಪತ್ರ

ವೈದ್ಯಕೀಯ ಅಧೀಕ್ಷಕರು/ಸಿಎಂಒ/ಆಸ್ಪತ್ರೆಯ ಮುಖ್ಯಸ್ಥರು ಯುಕ್ತವಾಗಿ ದೃಢೀಕರಿಸಿದ ಅಂಗವೈಕಲ್ಯವನ್ನು ತೋರಿಸುವ ಇತ್ತೀಚಿನ ಭಾವಚಿತ್ರವನ್ನು ಇಲ್ಲಿ ಅಂಟಿಸಿ

ಪ್ರಮಾಣಪತ್ರ ಸಂಖ್ಯೆ:

ದಿನಾಂಕ:

ಶ್ರೀ/ಶ್ರೀಮತಿ ---------- ಇವರ ಮಗ/ಮಗಳಾದ ಶ್ರೀ/ಶ್ರೀಮತಿ ---------, ವಯಸ್ಸು ---------- ವರ್ಷ, ನೋಂದಣಿ ಸಂ. ---------- ಇವರು ಶ್ರವಣ ದೋಷ/ಕುಷ್ಮರೋಗದಿಂದ ಗುಣಮುಖರಾಗಿದ್ದಾರೆ ಮತ್ತು ಇವರಿಗೆ ಶೇ. ----- (---%) ಖಾಯಂ ಅಂಗವೈಕಲ್ಯ ಇರುತ್ತದೆ (ದೈಹಿಕ ದೋಷ/ದೃಷ್ಟಿದೋಷ/ಕಿವುಡು ಮತ್ತು ಶ್ರವಣ ದೋಷ, ಮುಂತಾದವು) ಎಂದು ದೃಢೀಕರಿಸಲಾಗಿದೆ.

ಈ ಸ್ಥಿತಿಯು, ಬೆಳವಣಿಗೆಯಾಗುತ್ತಿದೆ/ ಬೆಳವಣಿಗೆಯಾಗುತ್ತಿಲ್ಲ/ಸುಧಾರಣೆಯಾಗುವ ಸಂಭಾವ್ಯವಿದೆ /ಸುಧಾರಣೆಯಾಗುವ ಸಾಧ್ಯತೆ ಇಲ್ಲ*.

ಮರುಪರಿಶೀಲನೆಗೆ ಶಿಫಾರಸು ಮಾಡಿರುವುದಿಲ್ಲ/ ---- ತಿಂಗಳುಗಳು/ವರ್ಷಗಳ ಅವಧಿಯ ನಂತರ ಮರುಪರಿಶೀಲನೆಗೆ ಶಿಫಾರಸು ಮಾಡಲಾಗಿದೆ*. (*ಅನ್ವಯವಾಗದಿರುವುದನ್ನು ಹೊಡೆದುಹಾಕಿ)

ವೈದ್ಯರ ಹೆಸರು ಮತ್ತು ಸಹಿ ----------ತಜ್ಞರು	ವೈದ್ಯರ ಹೆಸರು ಮತ್ತು ಸಹಿ ---------- ತಜ್ಞರು	ವೈದ್ಯರ ಹೆಸರು ಮತ್ತು ಸಹಿ ---------- ತಜ್ಞರು
ವಿದ್ಯಾರ್ಹತೆಯೊಂದಿಗೆ ಮೊಹರು (ಸದಸ್ಯ, ವೈದ್ಯಕೀಯ ಮಂಡಳಿ)	ವಿದ್ಯಾರ್ಹತೆಯೊಂದಿಗೆ ಮೊಹರು (ಸದಸ್ಯ, ವೈದ್ಯಕೀಯ ಮಂಡಳಿ)	ವಿದ್ಯಾರ್ಹತೆಯೊಂದಿಗೆ ಮೊಹರು (ಸದಸ್ಯ, ವೈದ್ಯಕೀಯ ಮಂಡಳಿ)

ರೋಗಿ(ನೌಕರರ)ಯ ಸಹಿ/ಹೆಬ್ಬೆಟ್ಟಿನ ಗುರುತು

ವೈದ್ಯಕೀಯ ಅಧೀಕ್ಷಕರು/ಸಿಎಂಒ/ಆಸ್ಪತ್ರೆಯ
ಮುಖ್ಯಸ್ಥರಮೇಲು ಸಹಿ (ಮೊಹರಿನೊಂದಿಗೆ)

ನಮೂನೆ-V
(4ನೇ ನಿಯಮವನ್ನು ಮತ್ತು ಅನುಸೂಚಿಯ ಕೋಷ್ಮಕ-III ಅನ್ನುನೋಡಿ)
ಘೋಷಣೆ
(ವಿಧವೆಯಾಗಿದ್ದಲ್ಲಿ)

ಶ್ರೀಮತಿ -----, ಹುದ್ದೆ---------- ಆದ ನಾನು ತಿಳಿಸುವುದೇನೆಂದರೆ, ನನ್ನ ಪತಿ ಮೃತರಾಗಿದ್ದು, ಈ ದಿನಾಂಕದವರೆಗೆ ನಾನು ಮರುಮದುವೆಯಾಗಿರುವುದಿಲ್ಲ ಮತ್ತು ಇದಕ್ಕೆ ಪೂರಕವಾಗಿ ಸಕ್ಷಮ ಪ್ರಾಧಿಕಾರವು ನೀಡಿದ ಮರಣ ಪ್ರಮಾಣಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದೇನೆ.

ಲಗತ್ತುಗಳು:

(ಎ) ಸಕ್ಷಮ ಪ್ರಾಧಿಕಾರವು ನೀಡಿದ ಮರಣ ಪ್ರಮಾಣಪತ್ರ

(ಬಿ) ಮರುಮದುವೆಯಾಗದೆ ಇರುವುದಕ್ಕೆ ಸಂಬಂಧಿಸಿದಂತೆ ಅಫಿಡವಿಟ್.

ದಿನಾಂಕ: ನೌಕರರ ಸಹಿ

ನಮೂನೆ-VI

(4ನೇ ನಿಯಮವನ್ನು ಮತ್ತು ಅನುಸೂಚಿಯ ಕೋಷ್ಕ-III ಅನ್ನು ನೋಡಿ)

ಘೋಷಣೆ

(18 ವರ್ಷದೊಳಗಿನ ಮಕ್ಕಳನ್ನು ಹೊಂದಿರುವ ಏಕ ಪೋಷಕ/ಕಿಗಾಗಿ)

ಶ್ರೀಮತಿ/ಶ್ರೀ -----, ಹುದ್ದೆ---------- ಆದ ನಾನು ತಿಳಿಸುವುದೇನೆಂದರೆ, 18 ವರ್ಷದೊಳಗಿನ ಮಗು/ಮಕ್ಕಳನ್ನು ಹೊಂದಿರುವ ಏಕ ಪೋಷಕ/ಪೋಷಕಿಯಾಗಿದ್ದೇನೆ ಮತ್ತು ಇದಕ್ಕೆ ಪೂರಕವಾದ ದಸ್ತಾವೇಜುಗಳನ್ನು ಲಗತ್ತಿಸಿದ್ದೇನೆ.

ಲಗತ್ತುಗಳು:

(ಎ) ಅವಲಂಬಿತ ಮಕ್ಕಳನ್ನು ಹೊಂದಿರುವ ಬಗ್ಗೆ ಅಫಿಡವಿಟ್.

(ಬಿ) ಮಗು/ಮಕ್ಕಳ ವಯಸ್ಸಿನ ದೃಢೀಕರಣಕ್ಕಾಗಿ ದಸ್ತಾವೇಜು/ಗಳು.

(ಸಿ) ಏಕ ಪೋಷಕರು ಎಂದು ಸಾಬೀತುಪಡಿಸಲು ದಸ್ತಾವೇಜು (ವಿಧವೆ/ವಿಚ್ಛೇಧಿತೆ/ಅವಿವಾಹಿತೆ/ಮರುವಿವಾಹವಾಗದಿರುವುದಕ್ಕಾಗಿ ಅಫಿಡವಿಟ್)

ದಿನಾಂಕ: ನೌಕರರ ಸಹಿ

ನಮೂನೆ-VII

(4ನೇ ನಿಯಮವನ್ನು ಮತ್ತು ಅನುಸೂಚಿಯ ಕೋಷ್ಕ-III ಅನ್ನು ನೋಡಿ)

ಘೋಷಣೆ

(ವಿಚ್ಛೇದಿತರಾಗಿರುವ ಮತ್ತು ಮರುಮದುವೆಯಾಗದಿರುವವರಿಗಾಗಿ)

ಶ್ರೀಮತಿ -----, ಹುದ್ದೆ---------- ಆದ ನಾನು ತಿಳಿಸುವುದೇನೆಂದರೆ, ನಾನು ವಿವಾಹ ವಿಚ್ಛೇದಿತಳಾಗಿದ್ದು,ಮರುಮದುವೆಯಾಗಿರುವುದಿಲ್ಲ ಮತ್ತು ಇದಕ್ಕೆ ಪೂರಕ ದಸ್ತಾವೇಜುಗಳನ್ನು ಇದರೊಂದಿಗೆ ಲಗತ್ತಿಸಿದ್ದೇನೆ.

ಲಗತ್ತುಗಳು:

(ಎ) ವಿವಾಹ ವಿಚ್ಛೇದನವಾಗಿರುವುದಕ್ಕೆ ಸಂಬಂಧಿಸಿದ ನ್ಯಾಯಾಲಯದ ಡಿಕ್ರಿ ಅಥವಾ ಖುಲಾ-ನಾಮ/ ತಲಾಖ್-ನಾಮ/ತಲಾಕ್-ಇ-ಮುಬಾರತ್ (ಮುಸ್ಲಿಮರಾದ ಸಂದರ್ಭದಲ್ಲಿ).

(ಬಿ) ಮರುಮದುವೆಯಾಗದಿರುವುದಕ್ಕೆ ಸಂಬಂಧಿಸಿದಂತೆ ಅಫಿಡವಿಟ್.

ದಿನಾಂಕ: ನೌಕರರ ಸಹಿ

ನಮೂನೆ – VIII

(2ನೇ ನಿಯಮವನ್ನು ಮತ್ತು ಅನುಸೂಚಿಯ ಕೋಷ್ಟಕ -III ಅನ್ನು ನೋಡಿ)

ಉದ್ಯೋಗದಾತರ ಪ್ರಮಾಣ ಪತ್ರ

(ಪತಿ/ ಪತ್ನಿಗಾಗಿ)

ವಿವರಗಳು

1) ನೌಕರನ ಹೆಸರು:
2) ಪತಿ/ ಪತ್ನಿಯ ಹೆಸರು:
3) ಕೆಲಸ ಮಾಡುತ್ತಿರುವ ಸ್ಥಳ:
4) ಪದನಾಮ:
5) ಕೆ.ಜಿ.ಐ.ಡಿ. ಸಂಖ್ಯೆ/ ನೌಕರನ ಅಧಿಕೃತ ಗುರುತಿನ ಚೀಟಿ:

ಮೇಲ್ಕಂಡ ವಿವರಗಳು ಅರ್ಜಿದಾರರ ಸೇವಾ ಪುಸ್ತಕ ಮತ್ತು ದಾಖಲೆಗಳ ಅನುಸಾರಸತ್ಯ ಮತ್ತು ನೈಜವಾಗಿವೆ ಎಂದು ಹಾಗೂ ನಾನು ಇವುಗಳನ್ನು ಪರಿಶೀಲಿಸಿದ್ದೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ಅರ್ಜಿದಾರನ ಸಹಿ

ವರದಿ ಮಾಡುವ ಪ್ರಾಧಿಕಾರದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ _____ಇವರ ಪತ್ನಿ/ಪತಿ ಶ್ರೀ/ಶ್ರೀಮತಿ_____ಇವರು, ಈ ಕಚೇರಿ/ ಇಲಾಖೆ/ಸಂಸ್ಥೆಯಲ್ಲಿ _____ಹುದ್ದೆ_____ಸ್ಥಳದಲ್ಲಿ_____ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆಂದು ಮತ್ತು ಈತನು/ ಈಕೆಯು ಈ ಸಂಸ್ಥೆಯ ಒಬ್ಬ ನೌಕರರೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮೇಲ್ಕಂಡ ವಿವರಗಳು ಅರ್ಜಿದಾರರ ಸೇವಾ ಪುಸ್ತಕ ಮತ್ತು ದಾಖಲೆಗಳ ಅನುಸಾರ ಸತ್ಯ ಮತ್ತು ನೈಜವಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

ದಿನಾಂಕ: ಮೊಹರಿನೊಂದಿಗೆ ಸಕ್ಷಮ ವರದಿ ಪ್ರಾಧಿಕಾರಿ ಕಛೇರಿ ಮುಖ್ಯಸ್ಥರ ಸಹಿ

ನಮೂನೆ-IX

(6ನೇ ನಿಯಮದ (2)(i)ನೇ ಉಪ-ನಿಯಮವನ್ನು ನೋಡಿ)

ಘೋಷಣೆ

(ಒಂದು ವರ್ಷಕ್ಕಿಂತ ಕಡಿಮೆ ಸೇವಾವಧಿಯನ್ನು ಹೊಂದಿರುವ ನೌಕರರಿಗಾಗಿ)

_____ ಆದ ನಾನು, _____ ರಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನನ್ನ ವಯೋನಿವೃತ್ತಿಯು_____(ದಿನಾಂಕ) ರಂದು ಇರುತ್ತದೆ.

ನೌಕರನ ಸಹಿ

ಮೇಲ್ಕಂಡ ವಿವರಗಳು ಸದರಿ ನೌಕರರ ಸೇವಾವಹಿ ಹಾಗೂ ದಾಖಲೆಗಳ ಅನುಸಾರ ಸರಿಯಾಗಿವೆ ಎಂದು ಪ್ರಮಾಣೀಕರಿಸಲಾಗಿದೆ.

ದಿನಾಂಕ: ಮೊಹರಿನೊಂದಿಗೆ ಸಕ್ಷಮ ವರದಿ ಪ್ರಾಧಿಕಾರಿಯ ಕಛೇರಿ ಮುಖ್ಯಸ್ಥರ ಸಹಿ

ನಮೂನೆ-X

(6ನೇ ನಿಯಮದ (2)(ii)ನೇ ಉಪ-ನಿಯಮವನ್ನು ಮತ್ತು ಅನುಸೂಚಿಯ ಕೋಷ್ಟಕ-III ಅನ್ನು ನೋಡಿ)

ಘೋಷಣೆ

(ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೇಂದ್ರ ಪದಾಧಿಕಾರಿಯಾಗಿರುವುದಕ್ಕಾಗಿ)

_____ ಆದ ನಾನು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿದ್ದೇನೆ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ.

ಲಗತ್ತು:

ಎ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿರುವುದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ನೀಡಿರುವ ಪತ್ರದ ಪ್ರತಿ.

ಬಿ. ಚುನಾವಣಾ ಅವಧಿಯನ್ನು ಸೂಚಿಸುವ ಸಂಘದ ಉಪ-ವಿಧಿಗಳ ಪ್ರತಿ.

ದಿನಾಂಕ:

ನೌಕರನ ಸಹಿ

(ಎಸ್.ಎಜಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ

GOVERNMENT OF KARNATAKA

No: MWD 396 MDS 2025

Karnataka Government Secretariat,
Vikasa Soudha,
Dr. B.R. Ambedkar Veedhi
Bengaluru, Dated:23.03.2026.

NOTIFICATION

The draft of the Karnataka Minority Welfare Services (Regulation Of transfers of Teachers and Lecturers) Rules, 2026 which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all the persons likely to be affected thereby and notice is hereby given that the said draft will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Secretary to Government, Department of Minority Welfare, Haj and Wakf, Vikasa Soudha, Dr B.R Ambedkar Veedhi, Bengaluru-560001.

DRAFT RULES

1. Title and commencement:- (1) These rules may be called the Karnataka Minority Welfare Services (Regulation Of transfers of Teachers and Lecturers) Rules, 2026.

(2) They shall come into force from the date of their final publication in the official Gazette.

2. Definitions.- (1) In these rules, unless the context otherwise requires,-

(a) "**Actual working**" means working place of employees where his daily attendance is recorded;

(b) "**Appointment**" means appointment by direct recruitment, by absorption or by promotion;

(c) "**Appointing Authority**" means the Director, Directorate of Minorities in respect of Teachers and Lecturers; as specified in Table-1 of the Schedule;

(d) "**Competent Authority**" means Competent Authority for Transfer Process, as specified in table-II of the Schedule;

(e) "**Counseling**" means the process of counseling conducted by the Appointing Authority by giving opportunity to an employee considered for transfer to opt for a place or post available as per these rules;

(f) "**Employee**" means Teachers and Lecturers;

(g) **"Form"** means form appended to these rules;

(h) "**Government**" means the Government of Karnataka;

(i) "**School or College**" means Minority Morarji Desai Residential School & College, Dr. A.P.J Abdul Kalam Residential School, Government Muslim Residential School and Moulana Azad Model School working under Minority Welfare Department.

(j) "**Lecturers"** means Lecturer working in school or college;
(k) "**Teachers**" means Teachers working in school or college;
(l) "**Lien**" has the same meaning as defined in the Karnataka Civil Service Rules, 1958;
(m) "**Minimum Period**" means a continuous service of two years rendered in Group-B Cadre and four years in Group-C Cadre;
(n) "**Person with bench mark Disability**" means a person with benchmark disability as defined in the Right of Persons with Disabilities Act, 2016 (Central Act 49 of 2016) and rules made thereunder;
(o) "**Proforma**" means Proforma as specified in Form-I;
(p) "**Regular Posting**" means place of posting of employee where his lien exists;
(q) "**Schedule**" means Schedule appended to these rules;
(r) "**Serious Ailments**" means and include,-
  (i) List of diseases as may be notified by the Government in case of an employee: and
  (ii) List of diseases as may be notified by the Government in case of an employee's spouse and their children;
(s) "**Spouse case"** means the spouse of an employee who is an employee of the State Government or Central Government or nationalized bank or a public sector undertaking or enterprise or corporation or board owned by the State Government or Central Government or State University;
(t) "**Transfer**" means posting of an employee from one place of working to another place of working and includes transfer within or outside the unit of seniority; and
(u) **"Unit of Seniority"** means the jurisdiction of the Appointing Authority competent to make appointment to the post of Teachers / Lecturers, as the case may be.

(2) The words and expressions used, but not defined shall have the same meaning as assigned to them in the Karnataka State Civil Service (General Recruitment) Rules, 1977.

3. Transfer of employees by counseling in the interest of public service or on request:- (1) The transfer of an employee under these rules shall be done through a process of counseling conducted in the manner specified in rule 8 to ensure rational filling up of vacancies.

(2) The employees of the Department of Minority Welfare, who are in service as on the date of commencement of these rules, who have completed not less than the minimum period of service in the post of Teachers / Lecturers working in school and college, may be transferred to another school or college on the basis of length of service in the school or college, on his request or in the public interest:

Provided that, the employees who have put in service of not less than two years in case of Group B and four years in case of Group C service shall be transferred on the basis of the length of service. The longest standing employee shall be considered in the descending order of his stay in a place of regular posting shall be compulsorily transferred in the interest of public service through a process of counseling subject to provisions of rule-4.

(3) The employees belonging to categories specified in rule-4 in clauses (a), (b), (c), (d) and (e) of serial No.2 of the Table, may request for transfer through counseling after completion of minimum period of service as specified in these

rules at the place of present regular posting as stipulated in sub-rule (2), subject to provisions of rule-4. For this purpose, the employees shall apply from any of the categories specified in rule-4 in clauses (a), (b), (c), (d) and (e) of serial No.2 of the Table. Total weightage shall be calculated by adding the scores of categories (b), (c), (d) and (e) of serial No.2 of the said Table.

4. Restriction on transfer:- The total number of transfers through counseling shall not exceed Eleven percent of the working strength of the employees. Out of Eleven percent of the total number of transfers, three percent shall be earmarked for compulsory transfers in the interest of public service through counseling and remaining eight percent shall be earmarked for transfers on request (in concerned Form) to categories specified in rule-4 in clauses (a), (b), (c), (d) and (e) of serial No.2 of the table:

Provided that, those employees who are facing Departmental Enquiries or Criminal proceedings shall not be posted to the places where the Departmental Enquiry or Criminal proceedings emerged.

TABLE

Sl. No.		Category	Percentage of transfers	Weightage
1.		Compulsory transfers in the public interest.	3 %	-
		Request Transfers		
2.	a	Transfer on request	3 %	-
	b	Spouse cases	2 %	1
	c	Cases of Single Woman or Widow or Single Parent with dependent children below 18 years or a single parent or a disabled spouse/child as a dependent (Form-VI).	1 %	2
	d	Serious ailment cases	1 %	3
	e	Cases of employees with benchmark disabilities.	1%	3
Total			**11%**	

Note: If the quota prescribed in categories specified in rule-4 in clauses (a), (b), (c), (d) and (e) of serial No.2 of the table, is left unutilized, the same may be utilized in category specified in serial No.1.

5. Mutual Transfers.- (1) Employees seeking mutual transfer must have completed the minimum period of service.

(2) The total number of mutual transfers shall not exceed one percent of the working strength of the employees.

(3) The number of mutual transfers shall not be taken into consideration in calculating the number of transfers for determining whether the transfer is within the limit of 11 percent, specified in table of rule-4.

(4) All mutual transfers shall be made only with the written consent of both the employees. This decision shall be confirmed in writing by both the employees before the issue of transfer orders.

6. Exceptions to transfers.- (1) The minimum period of service as specified in these rules may be reduced by one year for the employees belonging to

categories specified in rule-4 in clauses (a), (b), (c), (d) and (e) of serial No.2 of the table, if the concerned employee so desires. This facility shall ordinarily be availed only once in the total period of service:

Provided that,-

(i) where an employee, spouse or children suffering from serious ailment, if the concerned employee produces a certificate in concerned Forms under these rules, from the District Medical Board or specialized Government Institutions specifying the nature of aliment and stating the fact that the required treatment is not available at his actual place of work, then the minimum period of service as specified in sub-rule (1), shall not be applicable.

(ii) no transfer shall be considered under this provision unless the concerned employee produces a Certificate from the District Medical Board or specialized Government institutions specifying the nature of ailment, stating the fact that the required treatment is not available at his actual place of work and also specifying the place where the required treatment is available and certifying that this transfer is necessary to such a place to provide him the required medical treatment.

(2) An employee who has completed minimum period of service as specified in these rules shall be subject to exemptions from transfer, in the following cases namely:-

(i) An employee who has less than one year of service for superannuation shall not be transferred, if the employees so desires and make declaration in Form-IX.

(ii) An employee who is central office bearer of the Karnataka Government Employees Association and has completed minimum period of service as specified in these rules shall not be transferred till the completion of the term of the concerned office bearer unless a request of declaration made in Form-X.

(iii) Persons with bench mark disabilities shall not be transferred without their request.

(iv) Persons with serious ailments shall not be transferred without their request.

(3) Reinstatement and posting of employees under suspension/ disciplinary proceedings/criminal proceedings, if any, shall only be made to vacancies other than the place where he was working before suspension and/or initiation of disciplinary proceedings/criminal proceedings and not to the place where the cause of action has emerged. Such postings shall be made during the entire year as and when such situation arises.

7. Preparation of Priority lists: - (1) Transfers by counseling shall be done in respect of employees by allowing them to select any other schools or colleges listed for transfer except the present place of posting as per the priority list. It shall be ensured that the employees displaced because of transfers of employees from other categories, are given postings within the limit of 11 percent, specified under these rules.

